

# ಲಲಿತಾ ಕೆ. ಹೊಸಪ್ಯಾಟಿ ಅವರ ಕವಿತೆಗಳು

ಚಿತ್ರಗಳು: ಶಶಿಧರ ಹಳೇಮನಿ

## ಪಟಾ ಫಟ್ ಉತ್ತರ

ಚಿನ್ನು ನಿನ್ನ ಹೆಸರು ಏನು
ಬೇಗ ಹೇಳೆ
ಎಂತಹ ಮೆರೆವ ಅಜ್ಜಿ ನಿನಗೆ
ಸ್ವರ ತಾನೆ

ಚಿನ್ನು ಚಿನ್ನು ಕಣ್ಣು ಎಲ್ಲಿ
ನನಗೆ ತೋರಿಸೆ
ಹಣೆಯ ಕೆಳಗೆ ಮಿನುಗು ತಾರೆ
ಕಾಣದೇನೆ

ಚಿನ್ನು ಚಿನ್ನು ಹೊಟ್ಟೆ ಎಲ್ಲಿ
ತೆರೆದು ತೋರಿಸೆ
ದುದ್ದು ಕುಡಿದೆ ಉಬ್ಬಿ ಹೊಯ್ತು
ತೋರಿಸಲಾರೆ

ಚಿನ್ನು ಚಿನ್ನು ಹಲ್ಲು ಎಷ್ಟು
ಎಣಿಸಿ ತೋರಿಸೆ
ಕುಟುಂ ಕುಟುಂ ಕಡಲೆ ತಿಂದೆ
ಬಿದ್ದು ಹೋಯಿತೆ

ಚಿನ್ನು ಚಿನ್ನು ಗೊಂಬೆ ಎಲ್ಲಿ
ತಂದು ತೋರಿಸೆ
ತೊಟ್ಟಿಲಲ್ಲಿ ಎರೆದು ಹಾಕಿದೆ
ಸದ್ದು ಬೇಡವೆ!

ಪಟಾ ಪಟ್ ಚಿನ್ನು ಉತ್ತರ
ಅಜ್ಜಿಗೆ ಇಷ್ಟವೇ
ಕೆನ್ನೆಗೊಂದು ಮುದ್ದು ಕೊಟ್ರೆ
ಉಂಡ ಹಾಗೇನೆ

## ಚಿಂಟು ಮರಿ

ಚಿಂಟು ಮರಿ ನಾಯಿ ಮರಿ
ಚೋಟಿ ಚೂಟಿ ಗೊತ್ತಾ
ಬೊಗಳೋದಿಲ್ಲ ಕಚ್ಚೋದಿಲ್ಲ
ಎದ್ದಿರುತ್ತೆ ರಾತ್ರಿ ಹೊತ್ತಾ

ಅಪ್ಪ ಬಂದು ಬಟ್ಟಲ ತುಂಬ ಕಾಫೀ
ಕುಡಿಸ್ತಾನೆ ನಿತ್ಯ
ಮರೆತು ಅಪ್ಪ ಆಫೀಸ್ಗೆ ಹೋದ್ರೆ
ಮುನಿಸಿಕೊಳ್ಳುತ್ತೆ ಗೊತ್ತಾ

ಸುಸು ಬಂದರೆ ಗೇಟ್ ಹತ್ರ
ಮೂರು ಸಾರೆ ಬೊಗಳುತ್ತೆ

ಬೇಗ ಬಾಗಿಲು ತೆಗೆಯದೆ ಹೋದ್ರೆ
ಗುರ್ ಗುರ್ ಗುಟ್ಟುತ್ತೆ
ಹಾಲಿನ ಅಂಗಡಿಗೆ ಬಾಲ ಅಲ್ಲಾಡ್ಸಿ
ಅಜ್ಜಿ ಹಿಂದೆ ಹೋಗುತ್ತೆ
ಫ್ರೆಂಡ್ ನಾಯಿ ಎದುರಿಗೆ ಸಿಕ್ಕರೆ
ಅಜ್ಜಿಗೆ ಬಾಯ್ ಬಾಯ್ ಹೇಳುತ್ತೆ

ಚಿಂಟು ಬಗ್ಗೆ ಗೊತ್ತಾಯ್ತಲ್ಲ
ಬರೆಯಿರಿ ಒಂದು ಕವಿತೆ
ರಾಗ ತಾಳ ಲಯ ಕೂಡಿಸಿ
ಹಾಡಿ ಬಿಡಿ ಚರಿತೆ

